ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಅರಸೀಕೆರೆ ತಾಲ್ಲೂಕಿನಲ್ಲಿರುವ ಸರ್ಕಾರಿ ಶಾಲಾ ಕಾಲೇಜುಗಳಿಗೆ ಕಾಂಪೌಂಡ್ ಇಲ್ಲದೆ ಇರುವುದು ಸಾರ್ವಜನಿಕರ ತಂಗುದಾಣವಾಗುತ್ತಿರುವುದು ಹಾಗೂ ಅತಿಕ್ರಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಮೇಲ್ಕಂಡ ಎಲ್ಲಾ ಶಾಲಾ ಕಾಲೇಜುಗಳಿಗೆ ಕಾಂಪೌಂಡ್‌ಗಳನ್ನು ಆಳವಡಿಸುವುದರ ಮೂಲಕ ಸ್ವಚ್ಚತೆಯನ್ನು ಕಾಪಾಡಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಸಚಿವರು):

ಅ. ಹೌದು.

ಆ. ಹಣದ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಶಾಲೆಗಳ ಕಾಂಪೌಂಡುಗಳನ್ನು ನಿರ್ಮಿಸಲಾಗುವುದು. ಜಾವಗಲ್ ಮತ್ತು ಗಂಡಸಿ ಕಾಲೇಜುಗಳ ಕಟ್ಟಡ ಕಾಮಗಾರಿ ನಡೆಯುತ್ತಿದ್ದು ಅದರ ಜೊತೆಯಲ್ಲಿಯೇ ಕಾಂಪೌಂಡು ಗೋಡೆ ನಿರ್ಮಿಸಲಾಗುವುದು.

ಅರಸೀಕೆರೆ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕ ದುರಸ್ತಿ

೧೪೫೨(೧೬೭೦)

ಶ್ರೀ ಸಿದ್ದಪ್ಪ ಜಿ.ವಿ. (ಅರಸೀಕೆರೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕ ಹಾಗೂ ಆರೋಗ್ಯ ಕೇಂದ್ರ ಹೊಂದಿದ್ದ ಸಾರ್ವಜನಿಕ ಆಸ್ಪತ್ರೆಗಳ ಕಟ್ಟಡಗಳು ದುಸ್ಥಿತಿಯಲ್ಲಿರುವುದು ನಿಜವೆ;

ಆ) ಈ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸಿರುವ ವೈದ್ಯರಿಗೆ ಶುಶ್ರೂಷಕರಿಗೆ ಇನ್ನು ಮುಂತಾದವರಿಗೆ ವಸತಿ ಸೌಲಭ್ಯ ಇಲ್ಲದಿರುವುದು ನಿಜವಲ್ಲವೆ;

ಇ) ಹಾಗಿದ್ದಲ್ಲಿ ಈ ಬಗ್ಗೆ ಹಮ್ಮಿಕೊಂಡಿರುವ ಕ್ರಮಗಳು ಯಾವು ಯಾವುವು;

ಈ) ಎಷ್ಟು ಸಮಯದಲ್ಲಿ ಈ ಸಮಸ್ಯೆ ಬಗೆಹರಿಸಲಾಗುವುದು?

ಡಾ: ಎ.ಬಿ.ಮಾಲಕ ರೆಡ್ಡಿ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಆರಸೀಕೆರೆ ತಾಲ್ಲೂಕಿನಲ್ಲಿ ೧೩ ಪ್ರಾ.ಆ. ಕೇಂದ್ರಗಳು: ೮ ಪ್ರಾ.ಆ.ಘಟಕ; ಹಾಗೂ ಎರಡು ಸಮುದಾಯ ಕೇಂದ್ರವಿದೆ. ಅದರಲ್ಲಿ ಈ ಕೆಳಕಂಡ ಪ್ರಾ.ಆ.ಕೇಂದ್ರ/ ಪ್ರಾ.ಆ.ಘಟಕ ಹಾಗೂ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡಗಳಿಗೆ ದುರಸ್ತಿಯ ಅಗತ್ಯವಿದೆ.

೧. ಪ್ರಾ.ಆ. ಕೇಂದ್ರ ಹಾರನಹಳ್ಳಿ

೨. ಪ್ರಾ.ಆ.ಕೇಂದ್ರ ಬಾಣಾವರ

೩. ಪ್ರಾ.ಆ.ಘಟಕ, ತೊಳಲುತೊರೆ.

೪. ಪ್ರಾ.ಆ.ಘಟಕ ಮಾಡಾಳು

೫. ಸಿಹೆಚ್‌ಸಿ, ಗಂಡಸಿ

೬. ಸಿಹೆಚ್‌ಸಿ, ಜೆ.ಸಿ.ಪುರ

ಆ) ತಾಲ್ಲೂಕಿನಲ್ಲಿ ಇರುವ ೧೩ ಪ್ರಾ.ಆ. ಕೇಂದ್ರಗಳಲ್ಲಿ ೯ ಪ್ರಾ.ಆ. ಕೇಂದ್ರಗಳಿಗೆ ವಸತಿ ಸೌಲಭ್ಯ ಲಭ್ಯವಿರುತ್ತದೆ. ಮತ್ತು ೨ ಸಿಹೆಚ್‌ಸಿಗಳಿಗೆ ದುರಸ್ತಿಯ ಅಗತ್ಯವಿದೆ ಹಾಗೂ ಉಳಿದ ಎಲ್ಲಾ ಪ್ರಾ.ಆ. ಘಟಕಗಳಲ್ಲಿ ವಸತಿ ಸೌಲಭ್ಯ ಲಭ್ಯವಿರುವುದಿಲ್ಲ.

ಇ) ಐ.ಪಿ.ಪಿ..೯ರ ಯೋಜನೆಯಡಿಯಲ್ಲಿ ಕಲ್ಲೂಸಾದರಹಳ್ಳಿ/ಕಲ್ಯಾಡಿ.ಕಂಕೆರೆ/ ಕೊಂಡೇನಾಳು ಪ್ರಾ.ಆ. ಕೇಂದ್ರಗಳಲ್ಲಿ ವೈದ್ಯರಿಗೆ ವಸತಿ ಗೃಹ ಹಾಗೂ ೧೧ ಉಪ ಕೇಂದ್ರಗಳಲ್ಲಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಗೆ ವಸತಿ ಗೃಹ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ.

ಈ) ಇದು ಹಣದ ಲಭ್ಯತೆಯನ್ನು ಅವಲಂಬಿಸಿರುತ್ತದೆ.

ಆರಸೀಕೆರೆ ತಾಲ್ಲೂಕಿನಲ್ಲಿ ಶಾಲಾ ಕಾಲೇಜುಗಳ ದುಸ್ಥಿತಿ.

೧೪೫೩.(೧೬೭೧)

ಶ್ರೀ ಸಿದ್ದಪ್ಪ ಜಿ.ವಿ.(ಆರಸೀಕೆರೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?